# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಮಾನ್ಯ ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | 866 |
| ಉತ್ತರ ದಿನಾಂಕ | : | 18.12.2018 |

| ಕ್ರ ಸಂ: | ಪ್ರಶ್ನೆ | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ಪ್ರಾರಂಭ ಮಾಡುವ ಕಾಲದಲ್ಲಿ ಸ್ಥಳ ಆಯ್ಕೆ ಮಾಡಲು ಯಾವ ವಿಧಾನವನ್ನು ಅನುಸರಿಸಲಾಗುವುದು; | ಕುಡಿಯುವ ನೀರಿನ ಯೋಜನೆಗಳನ್ನು ಕೈಗೊಳ್ಳುವ ಮುನ್ನ ಈ ಕೆಳಗಿನಂತೆ ಸ್ಥಳಗಳನ್ನು ಆಯ್ಕೆ ಮಾಡಲಾಗುವುದು.<br>1. **ಕೊಳವೆ ಬಾವಿ-ಕೈಪಂಪುಗಳು:-** ಭೂವಿಜ್ಞಾನಿಗಳು ನೀರು ದೊರೆಯುವ ಸ್ಥಳಗಳನ್ನು ಗುರುತಿಸಿದ ನಂತರ ಯೋಜನೆ ರೂಪಿಸಲಾಗುವುದು.<br>2. **ಕೊಳವೆ ನೀರು ಸರಬರಾಜು ಯೋಜನೆ:-** ಭೂವಿಜ್ಞಾನಿಗಳು ನೀರು ದೊರೆಯುವ ಸ್ಥಳಗಳನ್ನು ಗುರುತಿಸಿದ ನಂತರ ಹಾಗೂ ಓವರ್‌ಹೆಡ್ ಟ್ಯಾಂಕ್‌ಗಳನ್ನು ನಿರ್ಮಾಣ ಮಾಡಲು ಸ್ಥಳಗಳನ್ನು ಗುರುತಿಸಿದ ನಂತರ ಯೋಜನೆ ರೂಪಿಸಲಾಗುವುದು.<br>3. **ಬಹುಗ್ರಾಮ ನೀರು ಸರಬರಾಜು ಯೋಜನೆ:-** ಯೋಜನೆಗಳಿಗೆ ನಿರಂತರವಾಗಿ ನೀರಿನ ಲಭ್ಯತೆ ಖಚಿತಪಡಿಸಿಕೊಂಡ ನಂತರ ಮತ್ತು Jackwell, WTP Components, ZBRs and MBRs ಗಳಿಗೆ ಅಗತ್ಯವಿರುವ ಸ್ಥಳಗಳನ್ನು ಸರ್ಕಾರದ ವಿವಿದ ಇಲಾಖೆಗಳು, ರೈಲ್ವೆ ಇಲಾಖೆ ಮತ್ತು ಖಾಸಗಿ ಜಮೀನುಗಳನ್ನು ಕಂದಾಯ ಇಲಾಖೆಯವರ ಮೂಲಕ ನಿಯಮಾನುಸಾರ ಈ ಇಲಾಖೆಗೆ ಪಡೆದ ನಂತರ ಯೋಜನೆ ರೂಪಿಸಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.<br>4. **ನೀರು ಶುದ್ಧೀಕರಣ ಘಟಕ:-** ನೀರು ಶುದ್ಧೀಕರಣ ಘಟಕಗಳ ಅನುಷ್ಠಾನಗೊಳಿಸಲು ಒಟ್ಟಾರೆ 1000 ಜನಸಂಖ್ಯೆಯ ಪ್ರದೇಶಗಳನ್ನು ಪರಿಗಣಿಸಿ ಸ್ಥಳದ ಲಭ್ಯತೆಯ ಆಧಾರದ ಮೇಲೆ ಅನುದಾನದ ಲಭ್ಯತೆಗೆ ಅನುಗುಣವಾಗಿ ಸ್ಥಳದ ಆಯ್ಕೆ ಮಾಡಲಾಗುವುದು. |
| ಆ) | ಬಹುತೇಕ ಯೋಜನೆಗಳಲ್ಲಿ ಕೆರೆ ನಿರ್ಮಾಣ ಮಾಡದೆ ಓವರ್‌ಹೆಡ್ ಟ್ಯಾಂಕ್‌ಗಳನ್ನು ಕಟ್ಟದೆ ಕೇವಲ ಪೈಪ್ ಮತ್ತು ಪೈಪ್‌ಲೈನ್‌ಗಳಿಗಾಗಿ ಹಣ ಖರ್ಚು ಮಾಡಲಾಗುತ್ತಿದ್ದು, ಇದರಿಂದ ಮುಂದಿನ ದಿನಗಳಲ್ಲಿ ಕೆರೆ ನಿರ್ಮಾಣ, ಓವರ್‌ಹೆಡ್ ಟ್ಯಾಂಕ್ ನಿರ್ಮಾಣಗಳಿಗೆ ಹಣ ಇಲ್ಲದಿರುವ ಪ್ರಕರಣಗಳ ಸಂಖ್ಯೆ ಎಷ್ಟು? | ನದಿ ಜಲಮೂಲಗಳು ಇಲ್ಲದೇ ಇರುವ ಯೋಜನೆಗಳಿಗೆ ಜಲಾಶಯಗಳ ಕಾಲುವೆಗಳ ಮುಖಾಂತರ ನೀರನ್ನು Impounding Reservoir ನಲ್ಲಿ ಸಂಗ್ರಹಣೆ ಮಾಡಿ ಯೋಜನೆಗಳನ್ನು ರೂಪಿಸಲಾಗಿರುತ್ತದೆ.<br>ಯೋಜನೆಗಳಿಗೆ ಯಾವುದೇ ರೀತಿಯ ಅನುದಾನದ ಕೊರತೆ ಇರುವುದಿಲ್ಲ. ಕಾಮಗಾರಿಯ ಭೌತಿಕ ಪ್ರಗತಿಗೆ ಹಾಗೂ ಬೇಡಿಕೆಗೆ ಅನುಗುಣವಾಗಿ ಕಾಲಕಾಲಕ್ಕೆ ಬಿಲ್ಲುಗಳನ್ನು ಪಾವತಿಸಲಾಗುವುದು.<br>ಯಾವುದೇ ಯೋಜನೆಗಳಿಗೆ ಓವರ್‌ಹೆಡ್ ಟ್ಯಾಂಕ್‌ಗಳನ್ನು ಕಟ್ಟದೆ ಕೇವಲ ಪೈಪ್ ಮತ್ತು ಪೈಪ್‌ಲೈನ್‌ಗಳಿಗಾಗಿ ಹಣ ಖರ್ಚು ಮಾಡಿರುವುದಿಲ್ಲ. |

ಸಂ:ಗ್ರಾಅಪ 106 ಗ್ರಾನೀಸ(3)18

(ಕೃಷ್ಣ ಬೈರೇಗೌಡ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು